





# ನಾಯಿ ಬ್ಯಾಲೆನ್ಸ್..!

ತಾಳ್ಮೆ, ಸಮಾಧಾನ, ಸ್ಥೈರಣೆ ಇವೆಲ್ಲವೂ ಈಗಿನ ಕಾಲದಲ್ಲಿ ಬರೀ ಶಬ್ದಕೋಶದ ಪದಗಳಾಗಿ ಬಿಟ್ಟಿವೆ. ಆದರೆ ಜೆಲ್ಡಾ ಹೆಸರಿನ ಹೆಣ್ಣು ನಾಯಿಯು ತೋರುವ ತಾಳ್ಮೆ ಅದ್ಭುತ. 'ಬಾರ್ಡರ್ ಕೂಲಿ' ಜಾತಿಯ ಈ ನಾಯಿಯ ತಲೆಯ ಮೇಲೆ ಟೆನ್ನಿಸ್ ಬಾಲನ್ನು ಇಡಿ. ಉಹುಂ, ಅದು ಬೀಳಿಸುವುದಿಲ್ಲ. ಬಾಳೆ ಹಣ್ಣು, ಕಿತ್ತಳೆ ಹಣ್ಣು, ಕೇಕ್, ಮೊಟ್ಟೆ, ತಿಂಡಿ ತುಂಬಿದ ತಟ್ಟೆ ಅಲ್ಲದೆ ನೀರು ತುಂಬಿದ ಲೋಟವನ್ನಿಟ್ಟರೂ ಇದು ಬೀಳಿಸದೆ ಬ್ಯಾಲೆನ್ಸ್ ಮಾಡುತ್ತದೆ. ಅದು ತಿನ್ನುವ ನಾಯಿ ಬಿಸ್ಕೆಟನ್ನು ಮೂಗಿನ ಮೇಲಿರಿಸಿದರೆ, ಅದನ್ನೂ ಸಹ ಹಾರಿ ತಿನ್ನಲು ಹಾತೊರೆಯದೇ ಹಾಗೆಯೇ ಇಟ್ಟುಕೊಳ್ಳುತ್ತದೆ. ಈ ಸಮಾಧಾನಿ ಶ್ವಾನದೊಡತಿ, ಪೆನ್ಸಿಲ್ವೇನಿಯಾದಲ್ಲಿರುವ ರೆಬೆಕ್ಕಾ ಜಾನ್ಸನ್.

ಕಾಲೇಜಿನಲ್ಲಿ ಕಲಿಯುತ್ತಿರುವ ರೆಬೆಕ್ಕಾ, ಮೊದಲು ಟೆನ್ನಿಸ್ ಬಾಲನ್ನು ಜೆಲ್ಡಾಳ ತಲೆ ಮೇಲಿರಿಸಿದಳಂತೆ, ಅದು ಬೀಳಿಸದೇ ಇಟ್ಟುಕೊಂಡಿದ್ದನ್ನು ನೋಡಿ ತಮಾಷೆಗಾಗಿ ಬೇರೆ ಬೇರೆ ವಸ್ತುಗಳನ್ನೂ ಇಟ್ಟು ನೋಡಿದಳಂತೆ. ಈ ರೀತಿಯಾಗಿ ತನ್ನ ನಾಯಿಯು ಬ್ಯಾಲೆನ್ಸ್ ಮಾಡುವ ವಿಷಯವನ್ನು ಸ್ನೇಹಿತೆಯ ಮುಂದೆ ಹೇಳಿದಾಗ ಆಕೆ, ನಾಯಿಯ ಫೋಟೊಗಳನ್ನು ತೆಗೆದು ಇಂಟರ್‌ನೆಟ್‌ನಲ್ಲಿ ಹಾಕಲು ಸಲಹೆ ನೀಡಿದಳಂತೆ.

ಕೇವಲ ನೂರಾರು ಜನರಷ್ಟೇ ಇದನ್ನು ನೋಡಬಹುದು ಎಂದುಕೊಂಡಿದ್ದ ರೆಬೆಕ್ಕಾಗೆ, ಕೇವಲ ಒಂದು ವಾರದ ಅವಧಿಯೊಳಗೆ 20 ಲಕ್ಷಕ್ಕೂ ಹೆಚ್ಚು ಜನರು ಜೆಲ್ಡಾಳ ಫೋಟೊ ವೀಕ್ಷಿಸಿದ್ದನ್ನು ನೋಡಿ ಬಹಳ ಅಚ್ಚರಿಯಾಯಿತಂತೆ. 'ಗುಡ್ ಮಾರ್ನಿಂಗ್ ಅಮೆರಿಕಾ' ಎಂಬ ಟಿ.ವಿ ಶೋ ನಲ್ಲಿಯೂ ಈ ನಾಯಿ ತನ್ನ ಬ್ಯಾಲೆನ್ಸಿಂಗ್ ಪವರ್ ಅನ್ನು ತೋರಿಸಿದೆ. ಅಂತೆಯೇ ಅತ್ಯಂತ ತಾಳ್ಮೆಯ ನಾಯಿ ಎಂಬ ಬಿರುದು ಕೂಡ ಪಡೆದಿದೆ.

■ ವಿದ್ಯಾ ವಿ. ಹಾಲಭಾವಿ